ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 1, Jul-Aug 2020, 95-105
©IIMRD, Mysuru
IIMRD JOURNALS
www.iimrd.com

# ಸಂಕಷ್ಟದಲ್ಲಿರುವ ಚನ್ನಪಟ್ಟಣದ ಬೊಂಬೆ ಉದ್ಯಮ ಮತ್ತು ಪರಿಹಾರ ಕ್ರಮಗಳು: ಒಂದು ಅಧ್ಯಯನ

ನಂದಿನಿ ಎನ್[1]

**ಪೀಠಿಕೆ**

ಸಾಂಪ್ರದಾಯಿಕ ಬೊಂಬೆಗಳನ್ನು ಪ್ರಧಾನವಾಗಿ ತಯಾರಿಸುತ್ತಿರುವ ಚನ್ನಪಟ್ಟಣದ ಕುಶಲಕರ್ಮಿಗಳು ಕಾಲಕ್ಕೆ ತಕ್ಕಂತೆ ಬದಲಾವಣೆಗಳನ್ನು ಮಾಡಿಕೊಂಡರೆ ಉದ್ಯಮಕ್ಕೆ ಅನುಕೂಲವಾಗುವುದು ನಿಶ್ಚಿತ. ಆಧುನಿಕ ಕಾಲದಲ್ಲಿ ಗ್ರಾಹಕರ ಅಭಿರುಚಿ, ಅಗತ್ಯಗಳನ್ನು ಮನಗಂಡು ಹೊಸ ಹೊಸ ಮಾದರಿಗಳನ್ನು ತಯಾರಿಸಿದರೆ ಗ್ರಾಹಕರ ಮನವನ್ನು ಸುಲಭವಾಗಿ ಗೆಲ್ಲಬಹುದು. ಇದರಿಂದಾಗಿ ಮಾರಾಟದ ಪ್ರಮಾಣ ಹೆಚ್ಚಾಗಿ ಉದ್ಯಮ ಚೇತರಿಸಿಕೊಳ್ಳುವುದು. ಯಾವುದೇ ಉದ್ಯಮದಲ್ಲಿ ನಷ್ಟ ಅಥವಾ ಸಾಲ ಎಲ್ಲವೂ ಮಾಮೂಲು. ಚನ್ನಪಟ್ಟಣದ ಮರದ ಉದ್ಯಮದಲ್ಲಿ ಮಾಲೀಕರು ಮತ್ತು ಕಾರ್ಮಿಕ ಎರಡೂ ವರ್ಗವನ್ನು ಆರ್ಥಿಕ ಸಮಸ್ಯೆ ಕಾಡುತ್ತದೆ. ಈ ಸಮಸ್ಯೆಗಳಿಗೆ ಪರಿಹಾರ ಒದಗಿಸದಿದ್ದರೆ ಉದ್ಯಮದ ಉಳಿವಿಗೆ ತೊಂದರೆ. ಲಾಭ ತರದ, ಬದುಕನ್ನು ಸಂಪನ್ನ ಮಾಡದ, ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸದ ಯಾವ ಕ್ಷೇತ್ರದಲ್ಲೂ ಯಾರೂ ಕೂಡ ತೊಡಗಿಕೊಳ್ಳಲು ಬಯಸುವುದಿಲ್ಲ. ಹಾಗಾಗಿ ಕುಶಲಕರ್ಮಿಗಳು, ಮಾಲೀಕರು ಮತ್ತು ಕಾರ್ಮಿಕ ವರ್ಗದ ಆರ್ಥಿಕ ಸಮಸ್ಯೆ ನಿವಾರಣೆಗೆ ಸೂಕ್ತ ಸಾಲ ನೀಡುವ ವ್ಯವಸ್ಥೆ ಆಗಬೇಕು.

ಕಾಲಕ್ಕೆ ತಕ್ಕಂತೆ ವೇಷ, ವೇಷಕ್ಕೆ ತಕ್ಕಂತೆ ಭಾಷೆ, ಭಾಷೆಗೆ ತಕ್ಕಂತೆ ನಡವಳಿಕೆ ಇರಬೇಕೆಂದು ಲೋಕಾನುಭವಿಗಳ ಮಾತು. ನಿತ್ಯ ನಿರಂತರ ಬದಲಾವಣೆಯನ್ನು ತನ್ನೊಡಲಿನಲ್ಲಿಟ್ಟುಕೊಂಡೇ ಸಾಗುವ ಕಾಲದ ಜೊತೆಗೆ ಎಲ್ಲವೂ, ಎಲ್ಲರೂ ಬದಲಾಗಲೇಬೇಕು. ಕಾಲಾನುಕಾಲಕ್ಕೆ ಬದಲಾವಣೆ ಮಾಡಿಕೊಳ್ಳುವುದು ಬೆಳವಣಿಗೆಯ ದೃಷ್ಟಿಯಿಂದ ಮಾನವನಿಗೆ ಅತ್ಯವಶ್ಯಕವಾಗಿದೆ.

ಕಾಲದ ಸ್ಥಿತ್ಯಂತರದಲ್ಲಿ ಅಡಗಿರುವ ಬದಲಾವಣೆಗಳು ಅಭಿವೃದ್ಧಿಯ ಹೊಸ ಶಕೆಗೆ ನಾಂದಿ ಹಾಡುವುದು ದಿಟ. ಬದಲಾವಣೆ ಮನುಷ್ಯನಿಗೆ ಮಾತ್ರ ಸೀಮಿತವಲ್ಲ, ಅದು ಎಲ್ಲಾ ಸಾಮಾಜಿಕ ಕ್ಷೇತ್ರಗಳಿಗೂ ಅನ್ವಯ. ಹೊಸತನದ ಅಳವಡಿಕೆ ಕಾಲದ ಅಗತ್ಯಗಳಿಗೆ ಪ್ರತಿಸ್ಪಂದನೆ ಬದಲಾವಣೆಯ ಪ್ರಮುಖ ಹಂತಗಳು. ಅದು ಹೊಸ ಯುಗದ ಆರಂಭಕ್ಕೆ ಮುನ್ನುಡಿ. ಮೂರು ಶತಮಾನಗಳಷ್ಟು ಪ್ರಾಚೀನತೆವುಳ್ಳ ಚನ್ನಪಟ್ಟಣದ ಬೊಂಬೆ ಉದ್ಯಮ ತನ್ನ ಸುದೀರ್ಘ ಯಾನದಲ್ಲಿ ಕಂಡುಂಡ ಕಷ್ಟಗಳಿಗೆ ಲೆಕ್ಕವಿಲ್ಲ. ಸಮಸ್ಯೆ–ಸವಾಲುಗಳ ಕಲ್ಲು ಮುಳ್ಳುಗಳ ಹಾದಿಯಲ್ಲಿ ನಡೆಯುತ್ತಲೇ ಸಾಧನೆಯ ಗಮ್ಯ

---

[1] *ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವ ವಿದ್ಯಾಲಯ., ಬೆಂಗಳೂರು.*

ಮುಟ್ಟಿದ್ದು ಸುಳ್ಳಲ್ಲ. ಪುಟ್ಟ ಹಳ್ಳಿಯಲ್ಲಿನ ಪಾರಂಪರಿಕ ಕಲೆಯ ಕೌಶಲ್ಯ ವಿಶ್ವದೆಲ್ಲೆಡೆ ಪಸರಿಸಿ ಕಂಪು ಬೀರುವುದು ಸುಲಭದ ಮಾತಲ್ಲ. ಅದು ಎಂದಿಗೂ ಅಚ್ಚಳಿಯದ ಇತಿಹಾಸ.

ಇಂತಹ ಭವ್ಯ ಇತಿಹಾಸವುಳ್ಳ ಚನ್ನಪಟ್ಟಣದ ಬೊಂಬೆ ಉದ್ಯಮ ಉತ್ತುಂಗದ ಸ್ಥಿತಿಯಲ್ಲಿರುವಾಗಲೇ ಹತ್ತು ಹಲವು ಸಮಸ್ಯೆಗಳಿಗೆ ಗುರಿಯಾಗಿದೆ. ನಿತ್ಯವೂ ಹೊಸ ಹೊಸ ತಂತ್ರಗಳನ್ನು ನಿರೀಕ್ಷಿಸುವ ಮಾರುಕಟ್ಟೆಯಲ್ಲಿ ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಲು ಹೆಣಗಾಡುವಂತಹ ಸ್ಥಿತಿ ಬಂದೊದಗಿದೆ.

ಹಾಗಂತ ಚನ್ನಪಟ್ಟಣದ ಮರದ ಉತ್ಪನ್ನಗಳಿಗಿರುವ ಬೇಡಿಕೆ ಪೂರ್ಣ ಕಡಿಮೆಯಾಗಿದೆಯೆಂದೇನೂ ಅಲ್ಲ. ಆದರೆ, ಚೀನಾದ ಪ್ಲಾಸ್ಟಿಕ್ ಬೊಂಬೆಗಳು ಒಡ್ಡಿರುವ ತೀವ್ರ ಪೈಪೋಟಿಯಲ್ಲಿ ಕೊಂಚ ತಡವರಿಸುವಂತಾಗಿರುವುದು ಮಾತ್ರ ಸತ್ಯ. ಅದೊಂದೇ ಅಲ್ಲದೆ ಇನ್ನು ಹತ್ತಾರು ಸಮಸ್ಯೆಗಳು ಈ ಪಾರಂಪರಿಕ ಕುಶಲಗಾರಿಕೆಯ ಉದ್ಯಮವನ್ನು ಬಾಧಿಸುತ್ತಲೇ ಇವೆ ಮುಂದೇನು..? ಮುಂಬರುವ ದಿನಗಳು ಹೇಗಿರಬಹುದೆಂಬ ಉತ್ತರ ಕಾಣದ ಪ್ರಶ್ನೆಗಳು ಈ ಉದ್ಯಮವನ್ನೇ ನಂಬಿಕೊಂಡಿರುವ ಕುಶಲಕರ್ಮಿಗಳು, ಕಾರ್ಮಿಕರು, ಕಾರ್ಖಾನೆಗಳ ಮಾಲೀಕರು ಹಾಗೂ ಮಾರಾಟಗಾರರನ್ನು ಎಡೆಬಿಡದೆ ಕಾಡುತ್ತಿದೆ.

ಸಮಸ್ಯೆಗಳಿರುವುದೇನೋ ನಿಜ. ಹಾಗಂತ ಅವುಗಳಿಂದ ಕಂಗೆಡಬೇಕಾದುದು ಬೇಡವೆನ್ನುವುದು ಅನುಭವಿಗಳ ಸಲಹೆ. ಸಮಸ್ಯೆ ಯಾವುದೇ ಇರಲಿ, ಯಾವುದೇ ಕ್ಷೇತ್ರವಿರಲಿ ಎಲ್ಲಕ್ಕೂ ಪರಿಹಾರವೊಂದು ಇದ್ದೇ ಇರುತ್ತದೆ. ಆ ಪರಿಹಾರದ ಮಾರ್ಗಗಳನ್ನು ಕಂಡುಕೊಂಡು ಆ ದಾರಿಯಲ್ಲಿ ಸಣ್ಣದಾಗಿ ಹೆಜ್ಜೆ ಹಾಕುತ್ತಾ ಪಯಣ ಆರಂಭಿಸಬೇಕಷ್ಟೇ. ಮೊದಮೊದಲು ಕಠಿಣವೆನಿಸುವ ಈ ಪಯಣ ದಿನಗಳು, ವರ್ಷಗಳು ಕಳೆದಂತೆ ಸಲೀಸೆನಿಸಿ ದಾರಿ ಸವೆಯುತ್ತಾ ಸವೆಯುತ್ತಾ ಪರಿಹಾರದ ಗಮ್ಯವನ್ನು ಮುಟ್ಟೇ ಬಿಡುತ್ತದೆ. ಹೊರಲಾರದ ಹೊರೆಯಾಗಿ ಗೋಚರಿಸಿದ್ದ ಸಮಸ್ಯೆಗಳ ಭಾರ ಮಲ್ಲಿಗೆಯ ದಂಡಿನಂತೆ ಹಗುರಾಗಿ ಬಿಡುತ್ತದೆ. ಕಾರ್ಗತ್ತಲಿನ ಸಮಸ್ಯೆಗಳಲ್ಲಿ ಕಣ್ಣು ತೆರೆಯದಾದಾಗ ಸಣ್ಣ ಬೆಳಕಿನ ಕಿರಣವೊಂದು ಉದಯಿಸಿ ಮುಚ್ಚಿದ್ದ ಕಣ್ಣುಗಳನ್ನು ತೆರೆಸಿ ಮೈಕೊಡವಿ ಬೆಳಕಿನತ್ತ ನಡೆಸಿದಂತೆ ಎಲ್ಲವೂ ಸರಿ ಹೋಗುತ್ತದೆ. ಎಲ್ಲಕ್ಕೂ ಪ್ರಯತ್ನ ಮತ್ತು ಕಾಯುವ ಅಸೀಮ ತಾಳ್ಮೆ ಬೇಕಷ್ಟೆ.

ಚನ್ನಪಟ್ಟಣದ ಬೊಂಬೆ ಉದ್ಯಮವೂ ಸದ್ಯ ಅಂತಹುದೇ ತಳಮಳದಲ್ಲಿದೆ. 'ತಲ್ಲಣಿಸದಿರು ತಾಳು ಮನವೇ' ಎಂದು ಈ ಉದ್ಯಮದ ಅವಲಂಬಿತರನ್ನು ಸಂತೈಸಬೇಕಿದೆ. 'ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ ಕೈ ಹಿಡಿದು ನಡೆಸೆನ್ನೆನು' ಎಂಬುದು ಈ ಉದ್ಯಮದ ಕುಶಲಕರ್ಮಿಗಳು, ಮಾಲೀಕರು ಮತ್ತು ಮಾರಾಟಗಾರರ ಒಕ್ಕೊರಲ ಆಗ್ರಹವಾಗಿದೆ.

ಕಷ್ಟ ಕಾಲದಲ್ಲಿ ನೆರವಿನ ನಿರೀಕ್ಷೆ ಸಹಜ. ಬಲಾಢ್ಯರು, ಅನುಕೂಲಸ್ಥರು ಕಷ್ಟದಲ್ಲಿರುವವರ ನರೆವಿಗೆ ಬಂದರೆ ಸಮಸ್ಯೆಗಳ ಸುಳಿಯಿಂದ ಹೊರಬರಲು ಸಾಧ್ಯವೆಂಬುದೇನೊ ನಿಜ. ಆದರೆ, ಸಮಸ್ಯೆಗಳ ಪರಿಹಾರಕ್ಕೆ ಕೇವಲ ಅನ್ಯರನ್ನಷ್ಟೇ ಅವಲಂಬಿಸುವುದು ತರವಲ್ಲ. ಸ್ವಯಂ ಪ್ರಯತ್ನವೂ ಬೇಕು. ನಮ್ಮ ಆ ಪ್ರಯತ್ನಗಳೇ ನಮ್ಮನ್ನು ಕೈಹಿಡಿಯುತ್ತವೆ. ಆ ಪ್ರಯತ್ನಗಳಿಗೆ ಅನ್ಯರು ಕೈ ಜೋಡಿಸಿದರೆ ಬೆಟ್ಟದಂತಹ

ಸಮಸ್ಯೆಗಳು ಮಂಜಿನಂತೆ ಕರಗಿ ಎಲ್ಲವೂ ಸುಖಾಂತ್ಯವಾಗುತ್ತದೆ. ಈ ಮಾತು ಎಲ್ಲರಂತೆ ಚನ್ನಪಟ್ಟಣದ ಬೊಂಬೆ ಉದ್ಯಮದಲ್ಲಿ ತೊಡಗಿರುವವರೆಲ್ಲರಿಗೂ ಅನ್ವಯಿಸದೇ ಇರದು.

ಒಂದೆಡೆ ಉದ್ಯಮದ ಕುಶಲಕರ್ಮಿಗಳು, ಮಾಲೀಕರು ಮತ್ತು ಮಾರಾಟಗಾರರು ಸಮಸ್ಯೆಗಳ ನಿವಾರಣೆಗೆ ತಮ್ಮ ಪರಿಧಿಯಲ್ಲಿ ಸಾಧ್ಯವಾಗುವ ಪರಿಹಾರದ ಮಾರ್ಗಗಳನ್ನು ಕಂಡುಕೊಳ್ಳಬೇಕು. ಮತ್ತೊಂದೆಡೆ ಈ ಉದ್ಯಮದ ಪುನಶ್ಚೇತನಕ್ಕೆ ಆಡಳಿತ ವ್ಯವಸ್ಥೆ ಅನೇಕ ಉಪಕ್ರಮಗಳನ್ನು ಕೈಗೊಳ್ಳಬೇಕು. ಈ ಎರಡು ಬದಿಯಲ್ಲಿ ಪ್ರಯತ್ನಗಳು ನಡೆದರೆ ಕಾಲದ ಹೊಡೆತಕ್ಕೆ ಸಿಲುಕಿ ಹೊಳಪು ಕಳೆದುಕೊಂಡಿರುವ ಚನ್ನಪಟ್ಟಣದ ಚಿತ್ತಾಕರ್ಷಕ ಬೊಂಬೆಗಳು ಮತ್ತೆ ಗತವೈಭವವನ್ನು ಪಡೆದು ಈ ಮುಂಚಿನಂತೆ ನಳನಳಿಸುವುದು ನಿಶ್ಚಿತ. ಆ ದೆಸೆಯಲ್ಲಿ ಆಗಬೇಕಿರುವ ಪ್ರಯತ್ನಗಳತ್ತ ಗಮನಹರಿಸುವುದು ಬಲು ಮುಖ್ಯ ಹಾಗೂ ಅವಶ್ಯಕ.

**ಹೊಸತನದ ಅವಶ್ಯ**

ಸಾಂಪ್ರದಾಯಿಕ ಬೊಂಬೆಗಳನ್ನು ಪ್ರಧಾನವಾಗಿ ತಯಾರಿಸುತ್ತಿರುವ ಚನ್ನಪಟ್ಟಣದ ಕುಶಲಕರ್ಮಿಗಳು ಕಾಲಕ್ಕೆ ತಕ್ಕಂತೆ ಬದಲಾವಣೆಗಳನ್ನು ಮಾಡಿಕೊಂಡರೆ ಉದ್ಯಮಕ್ಕೆ ಅನುಕೂಲವಾಗುವುದು ನಿಶ್ಚಿತ. ಆಧುನಿಕ ಕಾಲದಲ್ಲಿ ಗ್ರಾಹಕರ ಅಭಿರುಚಿ, ಅಗತ್ಯಗಳನ್ನು ಮನಗಂಡು ಹೊಸ ಹೊಸ ಮಾದರಿಗಳನ್ನು ತಯಾರಿಸಿದರೆ ಗ್ರಾಹಕರ ಮನವನ್ನು ಸುಲಭವಾಗಿ ಗೆಲ್ಲಬಹುದು. ಇದರಿಂದಾಗಿ ಮಾರಾಟದ ಪ್ರಮಾಣ ಹೆಚ್ಚಾಗಿ ಉದ್ಯಮ ಚೇತರಿಸಿಕೊಳ್ಳುವುದು ಖಂಡಿತವೆನ್ನುತ್ತಾರೆ ತಜ್ಞ ಉದ್ಯಮಿಗಳು.

**ಏಕಗವಾಕ್ಷಿ ಪದ್ಧತಿಯಿರಲಿ**

ಚನ್ನಪಟ್ಟಣದ ಕರಕುಶಲ ಉದ್ಯಮದಲ್ಲಿ ತೊಡಗಿರುವ ಕುಶಲಕರ್ಮಿಗಳಿಗೆ ಪ್ರಮುಖವಾಗಿ ಕಚ್ಚಾ ವಸ್ತುಗಳ ಕೊರತೆ ಎದುರಾಗಿದೆ. ಪ್ರಮುಖ ಕಚ್ಚಾ ವಸ್ತುಗಳಾದ ಆಲೆಮರ, ಅರಗು, ಬಣ್ಣ ಮತ್ತಿತರ ಸಾಮಗ್ರಿಗಳನ್ನು ಕೊಳ್ಳುವ ವ್ಯವಸ್ಥೆಯಲ್ಲಿ ಅನೇಕ ಅಡೆತಡೆಗಳಿವೆ. ಹಾಗಾಗಿ ಅವುಗಳು ಏಕಗವಾಕ್ಷಿ ಪದ್ಧತಿಯಡಿಯಲ್ಲಿ ಕುಶಲಕರ್ಮಿಗಳು, ಕಾರ್ಖಾನೆಗಳ ಮಾಲೀಕರಿಗೆ ದೊರೆಯುವಂತಾಗಬೇಕು. ಆ ನಿಟ್ಟಿನಲ್ಲಿ ಸರ್ಕಾರವೇ ತ್ವರಿತ ಕ್ರಮ ಕೈಗೊಂಡರೆ ಮರದ ಉತ್ಪನ್ನಗಳ ಸಕಾಲದಲ್ಲಿ ತಯಾರಾಗುವುದಲ್ಲದೆ ಯಾವುದೇ ಕೊರತೆ ಎದುರಾಗದು.

**ಆಧುನಿಕ ಸ್ಪರ್ಶ ಅಗತ್ಯ**

ಚನ್ನಪಟ್ಟಣದ ಬೊಂಬೆಗಳು ನೋಡಲು ಚೆಂದವಿರುವುದೇನೋ ನಿಜ. ಅವುಗಳನ್ನು ಇನ್ನಷ್ಟು ನವೀನ ರೀತಿಯಲ್ಲಿ ತೋರ್ಗಾಣಿಸುವುದು ಅವಶ್ಯ. ಕುಶಲಕರ್ಮಿಗಳು ತಾವು ತಯಾರಿಸುವ ಉತ್ಪನ್ನಗಳಿಗೆ ಆಧುನಿಕ ಸ್ಪರ್ಶ ನೀಡುವ ತುರ್ತು ಅಗತ್ಯವಿದೆ. ಆ ದೆಸೆಯಲ್ಲಿ ಪ್ರಾಮಾಣಿಕ ಪ್ರಯತ್ನಗಳಾಗಬೇಕಿದೆ.

**ತಾಂತ್ರಿಕ ಸಲಹೆ ಬೇಕು**

ಯಾವುದೇ ಉದ್ಯಮಕ್ಕೆ ತಾಂತ್ರಿಕತೆ ಬಹಳ ಮುಖ್ಯ. ತಾಂತ್ರಿಕ ಜ್ಞಾನ ಹೆಚ್ಚಿದಂತೆಲ್ಲ, ಹೊಸ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಂಡಾಗ ಉದ್ಯಮಗಳು ಹೆಚ್ಚಿನ ಅಭಿವೃದ್ಧಿಯನ್ನು ಕಾಣಲು ಸಾಧ್ಯ. ಚನ್ನಪಟ್ಟಣದ ಬೊಂಬೆ ಉದ್ಯಮದಲ್ಲಿ ತೊಡಗಿರುವವರಿಗೂ ತಾಂತ್ರಿಕ ಪರಿಣಿತಿಯ ಅತ್ಯವಶ್ಯಕವಿದೆ.

ಸಮೂಹ ಹಾಗೂ ಅಧಿಕ ಉತ್ಪನ್ನಗಳ ಉತ್ಪಾದನೆಗೆ ಹೆಚ್ಚಿನ ತಾಂತ್ರಿಕ ಜ್ಞಾನ ಹಾಗೂ ಸಲಹೆಯು ಬೇಕಿದ್ದು ಸರ್ಕಾರ ಆ ದೆಸೆಯಲ್ಲಿ ಕ್ರಮ ಕೈಗೊಳ್ಳಬೇಕು. ತಾಂತ್ರಿಕ ನಿಪುಣರನ್ನು ಕರೆಸಿ ಇಲ್ಲಿನ ಕುಶಲಕರ್ಮಿಗಳು ಮತ್ತು ಮಾಲೀಕರಿಗೆ ಮಾರ್ಗದರ್ಶನ ಮಾಡಿಸುವ ವ್ಯವಸ್ಥೆ ಮಾಡಬೇಕಿದೆ.

**ಸ್ಥಳೀಯವಾಗಿ ಮಾರುಕಟ್ಟೆ**

ಚನ್ನಪಟ್ಟಣದ ಕರಕುಶಲ ವಸ್ತುಗಳು ಜಗತ್ತಿನ ಗಣ್ಯಾತಿಗಣ್ಯರ ಮನಸೂರೆಗೊಂಡಿರುವುದಲ್ಲದೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿರುವುದು ದಿಟ. ಆದರೆ, ಈ ಅಂತಾರಾಷ್ಟ್ರೀಯ ಮಾರುಕಟ್ಟೆಯನ್ನು ಇಲ್ಲಿನ ಉತ್ಪನ್ನಗಳು ತಲುಪುವುದೇ ಕಷ್ಟಕರವೆನಿಸುತ್ತಿದೆ. ರಫ್ತು ನಿಯಮಾವಳಿಗಳು, ಮಧ್ಯವರ್ತಿಗಳಕಾಟ ಮತ್ತಿತರ ಸಮಸ್ಯೆಗಳು ಬಾಧಿಸುತ್ತಿವೆ. ಹಾಗಾಗಿ ಸ್ಥಳೀಯವಾಗಿಯೇ ಅಂತರಾಷ್ಟ್ರೀಯ ಮಾರುಕಟ್ಟೆ ನಿರ್ಮಾಣವಾದರೆ ಎಲ್ಲರಿಗೂ ಅನುಕೂಲವಾಗುತ್ತದೆ.

**ಪರ್ಯಾಯ ವಿದ್ಯುತ್**

ಯಾವುದೇ ಉತ್ಪನ್ನಗಳ ತಯಾರಿಕೆಯಲ್ಲಿ ವಿದ್ಯುತ್ ಪಾತ್ರ ಬಲು ದೊಡ್ಡದು. ವಿದ್ಯುತ್‌ನ ಸತತ ಲಭ್ಯತೆಯ ಮೇಲೆಯೇ ಉತ್ಪಾದನಾ ವ್ಯಾಪ್ತಿ ಅವಲಂಬಿಸಿರುತ್ತದೆ. ಅನಿಯಮಿತ ವಿದ್ಯುತ್ ಕಡಿತದಿಂದ ಚನ್ನಪಟ್ಟಣದ ಬೊಂಬೆ ಉದ್ಯಮ ತತ್ತರಿಸಿರುವುದರಿಂದ ನಿರಂತರ ವಿದ್ಯುತ್ ಪೂರೈಕೆಯ ವ್ಯವಸ್ಥೆ ಆಗಬೇಕು. ಅಂತೆಯೇ ಪರ್ಯಾಯ ವಿದ್ಯುತ್ ಪೂರೈಕೆಯ ಬಗ್ಗೆಯೂ ಸರ್ಕಾರ ಚಿಂತನೆ ನಡೆಸಿದರೆ ಉದ್ಯಮದ ಪುನಶ್ಚೇತನಕ್ಕೆ ಸಹಕಾರಿಯಾಗುತ್ತದೆ.

**ಪ್ರತ್ಯೇಕ ಬ್ಯಾಂಕ್**

ಉದ್ಯಮವೆಂದ ಮೇಲೆ ವ್ಯಾಪಾರ ವಹಿವಾಟು ಸಹಜ. ಬ್ಯಾಂಕ್‌ಗಳ ಜೊತೆ ನಿರಂತರ ವ್ಯವಹರಿಸಲೇಬೇಕಾಗುತ್ತದೆ. ಆಧುನಿಕ ಯುಗದಲ್ಲಿ ಒಂದೊಂದು ಕ್ಷೇತ್ರದವರಿಗೂ ಪ್ರತ್ಯೇಕ ಬ್ಯಾಂಕ್‌ಗಳಿವೆ. ಹೋಟೆಲ್ ಕಾರ್ಮಿಕರಿಗೆ ಪ್ರತ್ಯೇಕ ಸಹಕಾರಿ ಬ್ಯಾಂಕ್ ಇವೆ, ಲಾರಿ ಮಾಲೀಕರಿಗೆ ಬ್ಯಾಂಕ್‌ಗಳಿವೆ, ಕಟ್ಟಡ ಕಾರ್ಮಿಕರಿಗೂ ಪ್ರತ್ಯೇಕ ಬ್ಯಾಂಕಗಳಿವೆ, ಆದರೆ, ಚನ್ನಪಟ್ಟಣದ ಕುಶಲಕರ್ಮಿಗಳಿಗೆ ಆ ವ್ಯವಸ್ಥೆ ಇಲ್ಲ. ಹಾಗಾಗಿ ಇನ್ನಾದರೂ ಇಲ್ಲಿನ ಕುಶಲಕರ್ಮಿಗಳಿಗಾಗಿಯೆ ಪ್ರತ್ಯೇಕ ಬ್ಯಾಂಕ್ ವ್ಯವಸ್ಥೆ ಆಗಬೇಕಿದೆ. ಅದು ಹೆಚ್ಚಿನ ಹಾಗೂ ಸರಾಗ ಬ್ಯಾಂಕಿಂಗ್ ವ್ಯವಹಾರಗಳಿಗೆ ನಾಂದಿ ಹಾಡಲಿದೆ.

**ನೈರ್ಮಲ್ಯದ ಅಗತ್ಯ**

ಮರದ ಉತ್ಪನ್ನಗಳ ತಯಾರಿಕೆಯಲ್ಲಿ ತೊಡಗಿರುವ ಚನ್ನಪಟ್ಟಣದ ಕುಶಲರ್ಮಿಗಳು ಮರದ ಧೂಳು ಹೊಟ್ಟು ಮುಂತಾದವುಗಳಿಂದ ಹೃದಯ ಸಂಬಂಧಿ ಕಾಯಿಲೆ, ಟಿಬಿ ಮತ್ತಿತರ ಕಾಯಿಲೆಗಳಿಂದ ಬಳಲುತ್ತಿದ್ದಾರೆ. ಈ ಸಮಸ್ಯೆ ಇಂದು ನೆನ್ನೆಯದ್ದಾಗಿರದೆ ಅನುಗಾಲವೂ ಕಾಡುತ್ತಲಿದೆ. ಧೂಳಿಲ್ಲದ ಶುದ್ಧೀಕರಣದ ಯಂತ್ರಗಳೇ ಈ ಸಮಸ್ಯೆಗಳಿಗೆ ಪರಿಹಾರ. ಹಾಗಾಗಿ ಸರ್ಕಾರ ಅಂತಹ ಯಂತ್ರಗಳನ್ನು ಸಾಮೂಹಿಕವಾಗಿ ಕಡಿಮೆ ದರದಲ್ಲಿ ಇಲ್ಲಿನ ಕುಶಲಕರ್ಮಿಗಳಿಗೆ ಒದಗಿಸಿದರೆ ನೈರ್ಮಲ್ಯದ ವಾತಾವರಣದಲ್ಲಿ ಕೆಲಸ ಮಾಡಲು ಅನುಕೂಲವಾಗುವುದರ ಜೊತೆಗೆ ಅನಾರೋಗ್ಯದ ಸಮಸ್ಯೆಗಳಿಗೆ ಮುಕ್ತಿ ದೊರಕಿಸಿಕೊಟ್ಟಂತಾಗುತ್ತದೆ.

**ಉಚಿತ ವೈದ್ಯಕೀಯ ಚಿಕಿತ್ಸೆ**

ಮರದ ಉತ್ಪನ್ನಗಳ ತಯಾರಿಕೆಯಲ್ಲಿ ತೊಡಗಿರುವ ಕಾರ್ಮಿಕರು ಮತ್ತು ಕುಶಲಕರ್ಮಿಗಳಿಗೆ ವಿವಿಧ ಕಾಯಿಲೆಗಳಿಂದ ಬಳಲಿದಾಗ ಅವರಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆಯ ಅಗತ್ಯವಿದೆ. ಆ ದೆಸೆಯಲ್ಲಿ ಸರ್ಕಾರ ಉಚಿತ ಹಾಗೂ ಅತ್ಯಾಧುನಿಕ ವೈದ್ಯಕೀಯ ಚಿಕಿತ್ಸೆಯ ವ್ಯವಸ್ಥೆ ಮಾಡಬೇಕು

**ಪ್ರತ್ಯೇಕ ಆರೋಗ್ಯ ವಿಮೆ**

ಕುಶಲಕರ್ಮಿಗಳಿಗೇ ಪ್ರತ್ಯೇಕ ಆರೋಗ್ಯ ವಿಮೆಯನ್ನು ಒದಗಿಸಬೇಕು. ಈ ವಿಮೆಯು ಕುಶಲಕರ್ಮಿಗಳಿಗಷ್ಟೇ ಅಲ್ಲದೆ, ಅವರ ಅವಲಂಬಿತರಿಗೂ ಅನ್ವಯವಾಗುವಂತೆ ನಿಯಾಮಾವಳಿಗಳನ್ನು ರೂಪಿಸಬೇಕು. ಕುಶಲಕರ್ಮಿಗಳು ಆರೋಗ್ಯವಂತ ಸ್ಥಿತಿಯಲ್ಲಿದ್ದರೆ ಉತ್ಪಾದನೆಯ ಗುಣಮಟ್ಟ ಹಾಗೂ ಸಾಂದ್ರತೆ ಎರಡೂ ಹೆಚ್ಚುವುದರಿಂದ ಸಹಜವಾಗಿಯೆ ಉದ್ಯಮದ ಬೆಳವಣಿಗೆಯೂ ಚೇತರಿಕೆಯನ್ನು ಕಾಣುತ್ತದೆ.

**ಸಾಮಾಜಿಕ ಭದ್ರತೆ**

ಚನ್ನಪಟ್ಟಣದ ಮರದ ಉದ್ಯಮದಲ್ಲಿ ತೊಡಗಿರುವ ಕುಶಲಕರ್ಮಿಗಳಿಗೆ ಸಾಮಾಜಿಕ ಭದ್ರತೆಯಿಲ್ಲದಿರುವುದು ನೋವಿನ ಸಂಗತಿಯೇ. ಈ ಉದ್ಯಮ ನಿರತ ಕಾರ್ಮಿಕ ವರ್ಗದ ಕುಟುಂಬದ ಸರ್ಕಾರ ಕೂಡಲೇ ಸಾಮಾಜಿಕ ಭದ್ರತೆ ಒದಗಿಸಬೇಕು. ಉತ್ಪನ್ನಗಳನ್ನು ತಯಾರಿಸಲು ಅನುಸರಿಸಬೇಕಾದ ರಕ್ಷಣಾ ಕ್ರಮಗಳ ಬಗ್ಗೆ ಸೂಕ್ತ ಮನವರಿಕೆ ಮಾಡಿಕೊಡಬೇಕು.

**ಉಚಿತ ಶಿಕ್ಷಣ**

ಮರದ ಉತ್ಪನ್ನಗಳ ತಯಾರಿಕೆಯಲ್ಲಿ ತೊಡಗಿರುವ ಕುಶಲಕರ್ಮಿಗಳ ಆದಾಯ ಅಷ್ಟೇನೂ ಹೆಚ್ಚಲ್ಲ. ಸೀಮಿತ ಆದಾಯದಲ್ಲಿ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸುವುದು ಕುಶಲಕರ್ಮಿಗಳು ಮತ್ತು ಕಾರ್ಮಿಕರಿಗೆ ಕಷ್ಟವಾಗಿದೆ. ಹಾಗಾಗಿ ಸರ್ಕಾರ ಈ ಉದ್ಯಮದ ದುಡಿಯುವ ವರ್ಗದ ಕುಟುಂಬಗಳ ಮಕ್ಕಳಿಗೆ ಉಚಿತ ಶಿಕ್ಷಣವನ್ನು ನೀಡಬೇಕು. ಉನ್ನತ ಶಿಕ್ಷಣದಲ್ಲಿ ಪ್ರತ್ಯೇಕ ಮೀಸಲಾತಿಯೋ ಅಥವಾ ಕೃಪಾಂಕವನ್ನು ನೀಡುವಂತಾಗಬೇಕು.

**ಕಡಿಮೆ ದರದಲ್ಲಿ ಬಡ್ಡಿ**

ಯಾವುದೇ ಉದ್ಯಮದಲ್ಲಿ ನಷ್ಟ, ಸಾಲ ಎಲ್ಲವೂ ಮಾಮೂಲು. ಚನ್ನಪಟ್ಟಣದ ಮರದ ಉದ್ಯಮದಲ್ಲಿ ತೊಡಗಿರುವವರಲ್ಲಿ ಕುಶಲಕರ್ಮಿಗಳಿಗೆ ಬಂಡವಾಳದ ಕೊರತೆ, ಮಾಲೀಕರಿಗೆ ಹಣಕಾಸಿನ ಸ್ಥಿತಿಯನ್ನು ನಿಭಾಯಿಸುವಲ್ಲಿ ತೊಂದರೆ, ಕಾರ್ಮಿಕ ವರ್ಗಕ್ಕೆ ಬದುಕಿನ ಅಗತ್ಯಗಳ ಪೂರೈಸುವಲ್ಲಿ ಆಗಾಗ ಕಾಡುವ ಆರ್ಥಿಕ ಸಮಸ್ಯೆ. ಈ ತ್ರಿವಳಿ ಸಮಸ್ಯೆಗಳಿಗೆ ಪರಿಹಾರ ಒದಗಿಸದಿದ್ದರೆ ಉದ್ಯಮದ ಉಳಿವಿಗೆ ತೊಂದರೆ. ಲಾಭತರದ, ಬದುಕನ್ನು ಸಂಪನ್ನಮಾಡದ, ಕಷ್ಟಕಾರ್ಪಣ್ಯಗಳಿಗೆ ಸ್ಪಂದಿಸದ ಯಾವ ಕ್ಷೇತ್ರದಲ್ಲೂ ಯಾರೂ ಕೂಡ ತೊಡಗಿಕೊಳ್ಳಲು ಬಯಸುವುದಿಲ್ಲ.

ಹಾಗಾಗಿ ಕುಶಲಕರ್ಮಿಗಳು, ಮಾಲೀಕರು ಮತ್ತು ಕಾರ್ಮಿಕ ವರ್ಗ ಆರ್ಥಿಕ ಸಮಸ್ಯೆ ನಿವಾರಣೆಗೆ ಸೂಕ್ತ ಸಾಲ ನೀಡುವ ವ್ಯವಸ್ಥೆ ಆಗಬೇಕು. ಸದ್ಯ ಸಾಲ ನೀಡುವಿಕೆ ಜಾರಿಯಲ್ಲಿದೆಯಾದರೂ ಬ್ಯಾಂಕ್‌ಗಳಲ್ಲಿನ ಸಾಲದ ಮೇಲಿನ ಬಡ್ಡಿದರ ಹೆಚ್ಚಿರುವುದರಿಂದ ತುಂಬಾ ತೊಂದರೆಯಾಗುತ್ತಿದೆ. ಸರ್ಕಾರ ಈ ದುಡಿಯುವ ವರ್ಗಕ್ಕೆ ರೈತರು, ನೇಕಾರರಿಗೆ ನೀಡುವಂತೆ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯವನ್ನು ಒದಗಿಸಬೇಕು. ವೈಯುಕ್ತಿಕ ಆರ್ಥಿಕ ಸಮಸ್ಯೆಗಳು ನಿವಾರಣೆಯಾದರೆ ಉದ್ಯಮದಲ್ಲಿ ತೊಡಗಿಕೊಳ್ಳುವಿಕೆಯ ಪ್ರಮಾಣ ಹೆಚ್ಚುವುದು ಸಹಜ. ಅಂತೆಯೇ ಈ ಉದ್ಯಮವನ್ನು ತೊರೆಯುವವರ ಸಂಖ್ಯೆಯೂ ಕಡಿಮೆಯಾಗುತ್ತದೆ. ಎರಡೂ ಬೊಂಬೆಗಳ ಉದ್ಯಮದ ಪುನಶ್ಚೇತಕ್ಕಿರುವ ಉತ್ತಮ ದಾರಿಗಳೇ ಆಗಿವೆ.

### ವೈಜ್ಞಾನಿಕ ಬೆಲೆ ಅವಶ್ಯ

ಚನ್ನಪಟ್ಟಣದ ಬೊಂಬೆಗಳ ಉದ್ಯಮ ಉತ್ಪಾದಿಸುವ ಮರದ ಉತ್ಪನ್ನಗಳಿಗೆ ಸಾಕಷ್ಟು ಬೇಡಿಕೆಯೇನೋ ಇದೆ. ಉತ್ಪಾದನೆಯ ಸಾಂದ್ರತೆ–ಸಾಮರ್ಥ್ಯವೂ ಇದೆ. ಆದರೆ, ಮಧ್ಯವರ್ತಿಗಳ ವಿಪರೀತ ಹಾವಳಿಯಿಂದ ಕುಶಲಕರ್ಮಿಗಳು ಮತ್ತು ಮಾಲೀಕರ ಪರಿಶ್ರಮಕ್ಕೆ ತಕ್ಕಂತಹ ಪ್ರತಿಫಲವಾಗಲಿ, ಬೆಲೆಯಾಗಲಿ ಸಿಗುತ್ತಿಲ್ಲ. ಹಾಗಾಗಿ ಸರ್ಕಾರ ಈ ಮಧ್ಯವರ್ತಿಗಳ ಹಾವಳಿಗೆ ತಡೆ ನೀಡಲೇಬೇಕು. ಈ ಉದ್ಯಮವು ಉತ್ಪಾದಿಸುವ ಎಲ್ಲಾ ಉತ್ಪನ್ನಗಳ ಸಮೀಕ್ಷೆ ನಡೆಸಿ ವೈಜ್ಞಾನಿಕವಾಗಿ ಅಧ್ಯಯಿನಿಸಿ ಪ್ರತಿ ಉತ್ಪನ್ನಗಳಿಗೆ ಇಂತಿಷ್ಟು ಬೆಲೆಯನ್ನು ನಿಗದಿಪಡಿಸಬೇಕು. ಮಧ್ಯವರ್ತಿಗಳಾಗಲಿ, ಮಾರಾಟಗಾರರಾಗಲಿ ಆ ಬೆಲೆಗಿಂತ ಕಡಿಮೆಗೆ ಖರೀದಿ ಮಾಡಿದರೆ ಅದನ್ನು ಕಾನೂನುಬಾಹಿರ ಕೃತ್ಯವೆಂದು ಪರಿಗಣಿಸಿ ಅಂತಹವರನ್ನು ಕಾನೂನಿನ ಚೌಕಟ್ಟಿನಡಿ ಶಿಕ್ಷಿಸುವ ವ್ಯವಸ್ಥೆ ಆಗಬೇಕು.

### ತರಬೇತಿ ಕೇಂದ್ರ

ವಿಶ್ವದಲ್ಲೇ ಹೆಸರು ಮಾಡಿ ಭಾರತದ ಪಾರಂಪರಿಕ ಕಲೆಗಾರಿಕೆಯ ಹಿರಿಮೆಯನ್ನು ಹೆಚ್ಚಿಸಿರುವ ಚನ್ನಪಟ್ಟಣದ ಕರಕುಶಲಗಾರಿಕೆ ಉದ್ಯಮದಲ್ಲಿನ ಪರಿಣಿತರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದ್ದು, ಕುಶಲಕರ್ಮಿಗಳ ಕೊರತೆ ಎದ್ದುಕಾಣುತ್ತಿದೆ. ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಮುಂಬರುವ ದಶಕಗಳಲ್ಲಿ ಈ ಕುಶಲಗಾರಿಕೆ ಕೇವಲ ಕಾಗದದ ಮೇಲಿನ ಬರಹವಾಗಷ್ಟೇ ಉಳಿದರೂ ಆಶ್ಚರ್ಯ ಪಡಬೇಕಿಲ್ಲ. ಕುಶಲಕರ್ಮಿಗಳ ಪರಂಪರೆ ಉಳಿದರಷ್ಟೇ ಈ ಕಲಾ ಪರಂಪರೆಯು ಉಳಿಯಲು ಸಾಧ್ಯ. ಲಾಭ ಮತ್ತು ಅನುಕೂಲದತ್ತ ಮುಖಮಾಡಿ ಹೊರಟಿರುವ ಯುವಜನತೆಯನ್ನು ಈ ಕುಶಲಗಾರಿಕೆಯತ್ತ ಸೆಳೆಯುವ ಅವಶ್ಯಕತೆಯಿದೆ. ಆ ದೆಸೆಯಲ್ಲಿ ಸರ್ಕಾರ ಹೆಚ್ಚಿನ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿ ಶಿಕ್ಷಣಾರ್ಥಿಗಳಿಗೆ ಉತ್ತಮ ಮೊತ್ತದ ಶಿಷ್ಯವೇತನ ನೀಡಬೇಕು. ತರುಣರು ಕುಶಲಕರ್ಮಿಗಳಾಗಿ ಪರಿವರ್ತಿಯಾಗಲು ಅಗತ್ಯವಾದ ಎಲ್ಲಾ ಸೂಕ್ತ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು.

### ಹೆಚ್ಚಿನ ಅವಕಾಶ

ಸರ್ಕಾರ ಏರ್ಪಡಿಸುವ ಕರಕುಶಲ ಮೇಳಗಳು, ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನ ಹಾಗೂ ದಸರಾ ವಸ್ತು ಪ್ರದರ್ಶನಗಳಲ್ಲಿ ಕೆಲವೇ ಕೆಲವು ಕುಶಲಕರ್ಮಿಗಳಿಗೆ ಅವಕಾಶ ದೊರೆಯುತ್ತಿದೆ. ದೊಡ್ಡ ಸಂಖ್ಯೆಯ ಕುಶಲಕರ್ಮಿಗಳು ಅವಕಾಶದಿಂದ. ತಮ್ಮ ಉತ್ಪನ್ನಗಳ ಉತ್ತಮ ಮಾರಾಟದಿಂದ

ವಂಚಿತರಾಗುತ್ತಿದ್ದಾರೆ. ಇದು ಉದ್ಯಮದ ಬಗೆಗಿನ ಉತ್ಸಾಹ ಕಡಿಮೆಗೊಳ್ಳಲು ಕಾರಣವಾಗಿದೆ. ಹಾಗಾಗಿ ಸರ್ಕಾರ ಇಂತಹ ಹೆಚ್ಚು ಹೆಚ್ಚು ಪ್ರದರ್ಶನಗಳನ್ನು ಆಯೋಜಿಸಿ ಹೆಚ್ಚಿನ ಕುಶಲಕರ್ಮಿಗಳಿಗೆ ಅವಕಾಶಗಳನ್ನು ಒದಗಿಸಬೇಕು.

ಈ ವಸ್ತುಪ್ರದರ್ಶನಗಳಲ್ಲಿ ಪಾಲ್ಗೊಳ್ಳುವ ಕುಶಲಕರ್ಮಿಗಳಿಗೆ ಹೆಚ್ಚಿನ ಸಂಭಾವನೆ ನೀಡಬೇಕು. ಪ್ರವಾಸೋದ್ಯಮ ಇಲಾಖೆಯು ಗುರುತಿಸಿದ ಸ್ಥಳಗಳಲ್ಲಿ ಚನ್ನಪಟ್ಟಣದ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಿ ಅದನ್ನು ಹೆಚ್ಚು ಪ್ರಚುರ ಪಡಿಸಬೇಕು. ಆಗ ವ್ಯಾಪಾರ ವಹಿವಾಟು ಹೆಚ್ಚಾಗಿ ಕುಶಲಕರ್ಮಿಗಳು ಮತ್ತು ಮಾಲೀಕರ ಉತ್ಸಾಹ ಇಮ್ಮಡಿಗೊಳ್ಳುತ್ತದೆ. ಉದ್ಯಮದಲ್ಲಿನ ಪಾಲ್ಗೊಳ್ಳುವಿಕೆಯೂ ಹೆಚ್ಚುತ್ತದೆ.

**ರಫ್ತಿಗೆ ಉತ್ತೇಜನ**

ವಿದೇಶಗಳಲ್ಲಿ ಚನ್ನಪಟ್ಟಣದ ಬೊಂಬೆಗಳು, ಗೃಹೋಪಯೋಗಿ ಹಾಗೂ ಅಲಂಕಾರಿಕ ವಸ್ತುಗಳಿಗೆ ವಿಪರೀತ ಬೇಡಿಕೆಯಿರುವುದು ಈಗಾಗಲೇ ಸಾಬೀತಾಗಿರುವ ಅಂಶ. ಇಲ್ಲಿನ ಅನೇಕಾನೇಕ ವಸ್ತುಗಳು ಹೊರದೇಶಗಳಿಗೆ ರಫ್ತಾಗುತ್ತಿದೆ. ರಫ್ತಿನ ನಿಯಮಾವಳಿಗಳು ಕೊಂಚ ಬಿಗಿಯಿರುವುದರಿಂದ ಹಾಗೂ ರಫ್ತಿನ ತೆರಿಗೆ ಪ್ರಮಾಣ ಹೆಚ್ಚಿರುವುದರಿಂದ ಕುಶಲಕರ್ಮಿಗಳು ಮತ್ತು ಮಾಲೀಕರಿಗೆ ತುಂಬಾ ಲಾಭ ದೊರೆಯುತ್ತಿಲ್ಲ. ಹಾಗಾಗಿ ರಫ್ತಿನ ಕೆಲ ಬಿಗಿ ಕ್ರಮಗಳನ್ನು ಸರ್ಕಾರ ಸಡಿಲಗೊಳಿಸಿ ಚನ್ನಪಟ್ಟಣದ ಉತ್ಪನ್ನಗಳ ರಫ್ತಿಗೆ ಹೆಚ್ಚಿನ ಉತ್ತೇಜನ ನೀಡಬೇಕು. ಸ್ಥಳೀಯ ಉತ್ಪನ್ನಗಳು ಹೆಚ್ಚು ಹೆಚ್ಚು ರಫ್ತಾದರೆ, ಲಾಭದ ಅಂಶ ಹೆಚ್ಚಾದರೆ ಸಹಜವಾಗಿಯೇ ಉದ್ಯಮದ ಅವಲಂಬಿತರ ಉತ್ಸಾಹ ಹೆಚ್ಚುವುದರ ಜೊತೆಗೆ ಅವಲಂಬಿತರ ಸಂಖ್ಯೆಯೂ ವೃದ್ಧಿಸಲಿದೆ.

**ಚೀನಾ ಉತ್ಪನ್ನಗಳಿಗೆ ತಡೆ**

"ಚನ್ನಪಟ್ಟಣದ ಬೊಂಬೆ ಉದ್ಯಮದ ಜಂಘಾಬಲವನ್ನು ಅಲುಗಾಡಿಸಿರುವುದು ಚೀನಾದ ಅಗ್ಗದ ದರದ ಪ್ಲಾಸ್ಟಿಕ್ ಬೊಂಬೆಗಳು" ಈ ದಾಳಿಯನ್ನು ತಡೆಯುವುದು ತುರ್ತು ಅಗತ್ಯಗಳಲ್ಲಿ ಒಂದು. ಕೇಂದ್ರ ಸರ್ಕಾರ ದೇಶೀಯ ಪಾರಂಪರಿಕ ಕಲೆಯನ್ನು ಉಳಿಸುವ ನಿಟ್ಟಿನಲ್ಲಿ ಭಾರತದಲ್ಲಿ ಚೀನಾ ಬೊಂಬೆಗಳ ಮಾರಾಟಕ್ಕೆ ನೀಡಿರುವ ಅನುಮತಿಯನ್ನು ಹಿಂಪಡೆಯಬೇಕು. ಚೀನಾದ ಬೊಂಬೆಗಳು ಭಾರತೀಯ ಮಾರುಕಟ್ಟೆಯನ್ನು ಪ್ರವೇಶಿಸದಂತೆ ತಡೆದರೆ ಸ್ಥಳೀಯ ಮಾರುಕಟ್ಟೆಯಲ್ಲಿ ಚನ್ನಪಟ್ಟಣದ ಕರಕುಶಲ ಉತ್ಪನ್ನಗಳ ಮಾರಾಟ ನೂರ್ಮಡಿಗೊಳ್ಳಲಿದ್ದು, ಉದ್ಯಮ ದಿಢೀರ್ ಚೇತರಿಕೆ ಕಂಡು ಈ ಮುಂಚಿನಂತೆ ಸಂಪನ್ನ ಸ್ಥಿತಿಯನ್ನು ತಲುಪಲಿದೆ.

**ಸಂಶೋಧನಾ ಕೇಂದ್ರ**

ಮರದ ಉತ್ಪನ್ನಗಳ ತಯಾರಿಕೆಗೆ ಸಂಬಂಧಿಸಿದಂತೆ ವಿಶೇಷ ಸಂಶೋಧನೆಗಳ ಅವಶ್ಯಕತೆ ಇದ್ದು, ಈ ಸಂಬಂಧ ಕೇಂದ್ರ ಸರ್ಕಾರ ಚನ್ನಪಟ್ಟಣದಲ್ಲಿ ಆರ್.ಎನ್.ಡಿ. ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಬೇಕು. ಇಲ್ಲಿನ ಉದ್ದಿಮೆದಾರರು ಆ ಕೇಂದ್ರದ ಉಪಯೋಗ ಪಡೆಯಬೇಕು.

**ಡಿಪೋ ತೆರೆಯಲಿ**

ಚನ್ನಪಟ್ಟಣದ ಬೊಂಬೆ ಉದ್ಯಮ ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಕಚ್ಚಾವಸ್ತುಗಳಿಗಾಗಿ ಅಲೆಯುವುದು ಒಂದು. ಇದರಿಂದಾಗಿ ಕುಶಲಕರ್ಮಿ ಹಾಗೂ ಕಾರ್ಖಾನೆಗಳ ಮಾಲೀಕರ ಶ್ರಮ ಹೆಚ್ಚಾಗುವುದಲ್ಲದೆ, ಸಮಯವೂ ಸಾಕಷ್ಟು ವ್ಯಯವಾಗುತ್ತದೆ. ಹಾಗಾಗಿ ಸರ್ಕಾರ ಈ ಉದ್ಯಮದಲ್ಲಿ ಬಳಕೆಯಾಗುವ ಎಲ್ಲಾ ಕಚ್ಚಾವಸ್ತುಗಳು ಒಂದೇ ಕಡೆ ಸಿಗುವಂತಾಗಲು ಚನ್ನಪಟ್ಟಣದಲ್ಲಿಯೇ ಈ ಸಾಮಗ್ರಿಗಳ ಡಿಪೋ ತೆರೆಯಬೇಕೆಂಬುದು ಇಲ್ಲಿನ ಕುಶಲಕರ್ಮಿಗಳ ಬಹು ವರ್ಷಗಳ ಬೇಡಿಕೆ. ಸರ್ಕಾರ ಈಗಲಾದರೂ ಈ ಬೇಡಿಕೆಗೆ ಸ್ಪಂದಿಸಿ ತಕ್ಷಣ ತ್ವರಿತ ಕ್ರಮ ಕೈಗೊಂಡರೆ ಈ ಉದ್ದಿಮೆದಾರರು ಅನುಕೂಲವಾಗಿ ಉದ್ಯಮದ ಚೇತರಿಕೆಗೂ ಅವಕಾಶವಾಗಲಿದೆ.

**ಮನ್ನಣೆ ಅವಶ್ಯ**

ಯಾವುದೇ ಪ್ರತಿಭೆಗೆ ಮನ್ನಣೆ ದೊರೆತಾಗ ಅದು ಮತ್ತಷ್ಟು ಪ್ರಜ್ವಲಿಸುತ್ತದೆ. ಹೊಳಪಿನಂತೆ ಕಂಗೊಳಿಸುತ್ತದೆ. ಕಲಾವಿದರಿಗೆ ಚಪ್ಪಾಳೆ–ಮನ್ನಣೆಗಳೇ ಪರಮ ಸಂತೋಷದ ಸಂಗತಿ. ವಿಶ್ವವೇ ತಲೆದೂಗುವಂತಹ ಕಲೆಗಾರಿಕೆಯ ಕೌಶಲ್ಯ ಮೆರೆದಿರುವ ಚನ್ನಪಟ್ಟಣದ ಕುಶಲಕರ್ಮಿಗಳ ಪ್ರತಿಭೆಯನ್ನು ಗುರುತಿಸುವ ಕೆಲಸವಾಗಬೇಕು. ಪ್ರಗತಿಪರ ರೈತರಿಗೆ ಕೃಷಿ ಪಂಡಿತ ಮತ್ತಿತರ ಪ್ರಶಸ್ತಿ ಗೌರವಗಳನ್ನು ನೀಡುವಂತೆ ಪ್ರತಿಭಾವಂತ ಕುಶಲಕರ್ಮಿಗಳಿಗೆ ರಾಜ್ಯ ಮಟ್ಟದಲ್ಲಿ ಪ್ರಶಸ್ತಿ ನೀಡಿ ಗೌರವ ಸನ್ಮಾನ ಮಾಡಬೇಕು. ಆಗ ಕುಶಲಕರ್ಮಿಗಳು ಸಾರ್ಥಕತೆಯ ಭಾವದಲ್ಲಿ ಮಿಂದೇಳುವುದರ ಜೊತೆಗೆ ಹೆಚ್ಚಿನ ಉತ್ಸಾಹದಲ್ಲಿ ಅವರೂ, ಅವರಂತಾಗಲು ಮುಂದಿನ ಪೀಳಿಗೆ ಈ ಉದ್ಯಮದಲ್ಲಿ ತೊಡಗಿಕೊಳ್ಳಲು ಅನುಕೂಲವಾಗುತ್ತದೆ.

**ಕಲಾಕೃತಿಗಳ ಪ್ರದರ್ಶನ**

ಚನ್ನಪಟ್ಟಣದ ಬೊಂಬೆ ಉದ್ಯಮದಲ್ಲಿ ತಯಾರಾಗುವ ಶ್ರೇಷ್ಠ ಕಲಾಕೃತಿಗಳ ಪ್ರದರ್ಶನಕ್ಕೆ ಸರ್ಕಾರ ವ್ಯವಸ್ಥೆ ಮಾಡಬೇಕು. ಪ್ರತಿ ವರ್ಷ ತಪ್ಪದೇ ಈ ಉದ್ಯಮದಲ್ಲಿ ತಯಾರಾಗುವ ಎಲ್ಲಾ ಉತ್ಪನ್ನಗಳನ್ನು ಪ್ರದರ್ಶನ ಮಾಡಿ ಗಣ್ಯರು, ಜನಸಾಮಾನ್ಯರಿಗೆ ಅವುಗಳ ಪೂರ್ಣ ಪರಿಚಯ ಮಾಡಿಸಿಕೊಡಬೇಕು. ಆಗ ಈ ಕಲೆಯ ವ್ಯಾಪ್ತಿ ಮತ್ತಷ್ಟು ಹೆಚ್ಚಲು ಸಹಾಯಕವಾಗುತ್ತದೆ.

**ಕಾರ್ಯಾಗಾರದ ಅಗತ್ಯ**

ಚನ್ನಪಟ್ಟಣದ ಬೊಂಬೆ ಉದ್ಯಮದಲ್ಲಿ ತೊಡಗಿರುವ ಕುಶಲಕರ್ಮಿಗಳ ಶೈಕ್ಷಣಿಕ ಮಟ್ಟ ಅಷ್ಟೇನೂ ಹೆಚ್ಚಿನದಲ್ಲ. ಅನಕ್ಷರಸ್ಥರು, ಸ್ವಲ್ಪ ಅಕ್ಷರಾಭ್ಯಾಸ ಮಾಡಿದವರು, ಪ್ರೌಢಶಿಕ್ಷಣ ಮುಗಿಸಿದವರೇ ಹೆಚ್ಚು. ಈ ಕುಶಲಕರ್ಮಿಗಳಿಗೆ ಆಧುನಿಕ ತಂತ್ರಜ್ಞಾನಗಳ ಮಾಹಿತಿ–ಅರಿವು ಎರಡೂ ಇಲ್ಲ. ಹಾಗಾಗಿ ಹಳೆಕಾಲದ ಮಾದರಿಯಲ್ಲೇ ಕಲಾಕೃತಿಗಳ ರಚನೆಯಲ್ಲಿ ತೊಡಗಿದ್ದಾರೆ.

ಸರ್ಕಾರ ಇಂತಹ ಕುಶಲಕರ್ಮಿಗಳಿಗಾಗಿಯೆ ಪ್ರತಿ ವರ್ಷ ಒಂದೆರೆಡು ಬಾರಿ ಕಾರ್ಯಗಾರಗಳನ್ನು ಹಮ್ಮಿಕೊಳ್ಳಬೇಕು. ಕರಕುಶಲ ಉತ್ಪನ್ನಗಳ ತಯಾರಿಕೆಯಲ್ಲಿ ವಿಶೇಷ ಪರಿಣಿತಿ ಪಡೆದಿರುವ ದೇಶದ ವಿವಿಧ

ಭಾಗದಲ್ಲಿರುವ ನುರಿತ ಕುಶಲಕರ್ಮಿಗಳನ್ನು ಕರೆಯಿಸಿ ಅವರಿಂದ ಸ್ಥಳೀಯ ಕರಕುಶಲ ಕರ್ಮಿಗಳಿಗೆ ಮಾರ್ಗದರ್ಶನ ಮಾಡಿಸಬೇಕು. ಆ ಭಾಗದಲ್ಲಿನ ಕರಕುಶಲ ಉತ್ಪನ್ನಗಳ ತಯಾರಿಕೆಯ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಬೇಕು.

ಆಧುನಿಕ ತಂತ್ರಜ್ಞಾನಗಳ ಆವಿಷ್ಕಾರ ಮತ್ತು ಬೆಳವಣಿಗೆಯ ಬಗ್ಗೆ ಜ್ಞಾನವುಳ್ಳ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿ ಅವರಿಂದ ಸ್ಥಳೀಯ ಕುಶಲಕರ್ಮಿಗಳಿಗೆ ಬದಲಾಗುತ್ತಿರುವ ತಂತ್ರಜ್ಞಾನ ಮತ್ತು ಆ ತಂತ್ರಜ್ಞಾನದ ಅಳವಡಿಕೆಯ ಅವಶ್ಯಕತೆಯ ಬಗ್ಗೆ ಉಪನ್ಯಾಸ ಮಾಡಿಸಬೇಕು. ಆ ಮೂಲಕ ಚನ್ನಪಟ್ಟಣ ತಾಲ್ಲೂಕಿನ ಕುಶಲಕರ್ಮಿಗಳು ತಂತ್ರಜ್ಞಾನ ಮತ್ತು ಕಲೆಯ ಹೊಸ ರೂಪಾಂತರಗಳನ್ನು ಅರಿತುಕೊಂಡು ಅದನ್ನು ತಮ್ಮ ಉತ್ಪನ್ನಗಳ ತಯಾರಿಕೆಯಲ್ಲಿ ಅಳವಡಿಸಿಕೊಳ್ಳಲು ನೆರವಾಗುತ್ತದೆ.

ಕಂಪೂಟರ್ ತಂತ್ರಜ್ಞಾನದಿಂದ ಕಲ್ಪಿತ ಉತ್ಪನ್ನಗಳ ಮಾದರಿಗಳನ್ನು ತಯಾರಿಸಿ ಕೊಡುವಂತಾಗಬೇಕು. ಆ ಪ್ರಯತ್ನದಲ್ಲಿ ಇಲ್ಲಿನ ಕುಶಲಕರ್ಮಿಗಳು ಸಫಲರಾದರೆ ಹೊಸ ಮಾದರಿಯ ಉತ್ಪನ್ನಗಳು ಹಾಗೂ ಹೊಸ ಕಳೆಯೊಂದಿಗೆ ಹಳೆಯ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಗ್ರಾಹಕರ ಮನಗೆದ್ದು, ವ್ಯಾಪಾರದ ವಹಿವಾಟು ಹೆಚ್ಚಿಸಿಕೊಳ್ಳುವುದು ಖಂಡಿತ. ಅದು ಉದ್ಯಮದ ಚೇತರಿಕೆಗೆ ಸಹಜವಾಗಿಯೇ ಪೂರಕ.

**ಗುಣಮಟ್ಟದತ್ತ ಗಮನ**

ಆಧುನಿಕ ಕಾಲದಲ್ಲಿ ವಸ್ತುಗಳು ಯಾವುದೇ ಇರಲಿ ಗುಣ ಮಟ್ಟಕ್ಕೇ ಪ್ರಥಮಾದ್ಯತೆ. ಗುಣಮಟ್ಟವಿಲ್ಲದ ಯಾವ ವಸ್ತುಗಳನ್ನು ಖರೀದಿಸಲು ನವಯುಗದ ಗ್ರಾಹಕರು ಬಯಸುವುದಿಲ್ಲ. ಹಾಗೊಂದು ವೇಳೆ ಖರೀದಿಸಿದರೂ ಅದರ ಪ್ರಮಾಣ ಕಡಿಮೆಯೇ. ಈ ಸತ್ಯವನ್ನು ಚನ್ನಪಟ್ಟಣದ ಬೊಂಬೆ ಉದ್ಯಮದಲ್ಲಿ ತೊಡಗಿರುವವರು ಅರಿಯಬೇಕಾಗಿದೆ. ಆಧುನಿಕತೆಯ ಗಾಳಿ ಬೀಸಿದಂತೆಲ್ಲಾ ಚೀನಾದ ಪ್ಲಾಸ್ಟಿಕ್ ಬೊಂಬೆಗಳ ಅಬ್ಬರದಿಂದ ಬೇಸತ್ತು ಬಳಲಿರುವ ಇಲ್ಲಿನ ಕುಶಲಕರ್ಮಿಗಳಲ್ಲಿ ಕೆಲವರು ಬೊಂಬೆಗಳಿಗೆ ರಾಸಾಯನಿಕ ಬಣ್ಣಗಳನ್ನು ಬಳಸುತ್ತಿರುವುದು ಕಂಡುಬಂದಿದೆ. ನೈಸರ್ಗಿಕ ಬಣ್ಣ ಬಳಕೆಯಿಂದಲೇ ಗ್ರಾಹಕರ ಮನಗೆದ್ದಿದ್ದ, ಚೀನಾ ಬೊಂಬೆಗಳಿಗೆ ಸೆಡ್ಡು ಹೊಡೆಯುತ್ತಿದ್ದ ಚನ್ನಪಟ್ಟಣದ ಬೊಂಬೆಗಳಿಗೂ ರಾಸಾಯನಿಕ ಬಣ್ಣ ಬಳಕೆಯಾಗುತ್ತಿರುವುದು ಗ್ರಾಹಕರ ಗಮನಕ್ಕೆ ಬಂದು ವಹಿವಾಟಿಗೆ ಕುತ್ತು ಬಂದಿರುವುದು ಸಂಶೋಧನೆಯಿಂದ ಪತ್ತೆಯಾಗಿದೆ. ಈ ಚಾಳಿ ಹೀಗೆಯೆ ಮುಂದುವರೆದರೆ ಇಲ್ಲಿನ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಬೇಡಿಕೆ ಕಳೆದುಕೊಳ್ಳುವುದಂತೂ ಸತ್ಯ. ಹಾಗಾಗಿ ಈಗಲೇ ಎಚ್ಚೆತ್ತುಕೊಳ್ಳುವುದು ಒಳಿತು. ರಾಸಾಯನಿಕ ಬಣ್ಣಗಳ ಬಳಕೆಯನ್ನು ಕೈಬಿಟ್ಟು ಈ ಮೊದಲಿನಂತೆ ತರಕಾರಿ ಜನ್ಯ ಬಣ್ಣಗಳನ್ನು ಬಳಸಬೇಕು ಹಾಗೂ ಬೊಂಬೆಗಳ ಗುಣಮಟ್ಟದತ್ತ ವಿಶೇಷ ಗಮನ ಹರಿಸಬೇಕು. ಆಗ ತಡವಾದರೂ ಇಲ್ಲಿನ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚುವುದು ಶತಸಿದ್ಧ.

**ವೆಚ್ಚಕ್ಕೆ ಕಡಿವಾಣ**

ಬದಲಾದ ಕಾಲಘಟ್ಟದಲ್ಲಿ ಚನ್ನಪಟ್ಟಣದ ಮರದ ಉತ್ಪನ್ನಗಳ ತಯಾರಿಕಾ ವೆಚ್ಚ ಅಧಿಕಗೊಂಡಿರುವುದು ತಿಳಿದ ವಿಚಾರವೇ. ಕಚ್ಚಾವಸ್ತುಗಳ ಬೆಲೆ, ಕಾರ್ಮಿಕರ ಕೂಲಿ ಮತ್ತಿತರ ಎಲ್ಲವೂ

ಹೆಚ್ಚಳವಾಗಿರುವುದರಿಂದ ಉತ್ಪನ್ನಗಳ ಬೆಲೆಯೇ ಹೆಚ್ಚಾಗಿದೆ. ಮಾರಾಟದ ದೃಷ್ಟಿಯಿಂದ ಉತ್ಪನ್ನಗಳ ಬೆಲೆ ಏರಿಕೆಯಾಗದಂತೆ ನೋಡಿಕೊಳ್ಳುವುದು ತುರ್ತು ಅಗತ್ಯಗಳಲ್ಲೊಂದು. ಆ ದೆಸೆಯಲ್ಲಿ ತಯಾರಿಕಾ ವೆಚ್ಚವನ್ನು ಮಿತಗೊಳಿಸಲು ಕಡಿಮೆ ಖರ್ಚಿನಲ್ಲಿ ಹೆಚ್ಚು ಹೆಚ್ಚು ಉತ್ಪನ್ನಗಳನ್ನು ತಯಾರಿಸುವ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕಿದೆ.

**ಸಮ್ಮಿಲನದ ಉತ್ಪನ್ನಗಳು**

ಚನ್ನಪಟ್ಟಣದ ಬೊಂಬೆ ಉದ್ಯಮದಲ್ಲಿ ವಿವಿಧ ಬಗೆಯ ಮರಗಳನ್ನು ಬಳಸಿ ತರಹೇವಾರಿ ಉತ್ಪನ್ನಗಳನ್ನು ತಯಾರಿಸುವುದು ರೂಢಿಗತ. ಸದ್ಯ ಮರದ ಬೆಲೆ ಪ್ರತಿ ವರ್ಷವೂ ಏರಿಕೆಯಾಗುತ್ತಿರುವುದರಿಂದ ತಯಾರಿಕಾ ವೆಚ್ಚವೂ ಏರುತ್ತಲಿದೆ. ಹಾಗಾಗಿ ಮರ–ಲೋಹ, ಮರ–ಗಾಜು, ಮರ–ಶಿಲೆ, ಮರ–ಬೊಂಬು, ಮರ–ಬಟ್ಟೆ. ಈ ತರಹದ ಸಮ್ಮೀಲನದ ಉತ್ಪನ್ನಗಳನ್ನು ಅಭಿವೃದ್ಧಿಗೊಳಿಸಿ ಹೊಸ ಮಾದರಿಗಳನ್ನು ಉತ್ಪಾದಿಸಿದರೆ ಉತ್ಪಾದಿತ ವೆಚ್ಚ ಸಹಜವಾಗಿಯೆ ಕಡಿಮೆಯಾಗುವುದಲ್ಲದೆ ನಷ್ಟದ ಪ್ರಮಾಣ ತಗ್ಗಿಸಿ ಲಾಭಾಂಶ ಹೆಚ್ಚಿಸಿ ಉದ್ಯಮ ಪುನಶ್ಚೇತನಗೊಳ್ಳುತ್ತದೆ.

**ಪತ್ರಿಕೆ ಅವಶ್ಯ**

ಜಗತ್ತಿನ ವಿವಿಧೆಡೆ ಕರಕುಶಲ ಉದ್ಯಮ ಹಾಗೂ ಗುಡಿ ಕೈಗಾರಿಕೆಯಲ್ಲಿ ಆಗುತ್ತಿರುವ ಬದಲಾವಣೆ ಮತ್ತು ವ್ಯಾಪಾರ ವಹಿವಾಟಿನ ಪ್ರಮಾಣಗಳನ್ನು ಸ್ಥಳೀಯ ಉದ್ದಿಮೆದಾರರು ಮತ್ತು ಕುಶಲಕರ್ಮಿಗಳು ಅರಿಯುವುದು ಮುಖ್ಯ. ಜ್ಞಾನದ ಕೊರತೆ ಎಂದಿಗೂ ಸಮಸ್ಯೆಗೆ ಮೂಲ. ಹಾಗಾಗಿ ಇಂತಹ ಉಪಯುಕ್ತ ಮಾಹಿತಿಗಳುಳ್ಳ, ಕರಕುಶಲ ವಸ್ತುಗಳ ಕೌಶಲ್ಯವನ್ನು ಬಿಂಬಿಸುವ ಪ್ರತ್ಯೇಕ ಪತ್ರಿಕೆಯ ಅವಶ್ಯಕತೆಯಿದ್ದು, ಸರ್ಕಾರ ಕೈಗಾರಿಕಾ ಅಭಿವೃದ್ಧಿ ನಿಗಮದಿಂದ ಅಂತಹ ಪತ್ರಿಕೆಯನ್ನು ಹೊರ ತರಬೇಕು. ಸ್ಥಳೀಯ ಕುಶಲಕರ್ಮಿಗಳಿಗೆ ಪತ್ರಿಕೆ ದೊರೆಯುವಂತೆ ಮಾಡಿದರೆ ಈ ಉದ್ಯಮದ ಅವಲಂಬಿತರ ಅರಿವಿನ ಪರಿಧಿ ವಿಸ್ತಾರಗೊಳ್ಳುವುದು ಖಂಡಿತ. ಅದು ಉದ್ಯಮದ ಬೆಳವಣಿಗೆಗೆ ಸಹಜವಾಗಿಯೆ ಪೂರಕವೂ ಸಹ.

ಕಾಲಚಕ್ರದ ಉರುಳಿನಲ್ಲಿ ಸಿಲುಕಿರುವ ಚನ್ನಪಟ್ಟಣದ ಬೊಂಬೆ ಉದ್ಯಮ ಸಮಸ್ಯೆಗಳ ಹತ್ತಾರು ಉಳಿಪೆಟ್ಟುಗಳನ್ನು ತಿನ್ನುತ್ತಲೇ ಮುನ್ನಡೆದಿದೆ. ಉದ್ಯಮದ ಈ ಎಲ್ಲಾ ಸಮಸ್ಯೆಗಳಿಗೆ ಈಗಾಗಲೆ ಚರ್ಚಿಸಿದಂತೆ ಅನೇಕಾನೇಕ ಪರಿಹಾರದ ಮಾರ್ಗೋಪಾಯಗಳಿವೆ. ನಿತ್ಯ ಹೊಸ ಹೊಸ ಸಮಸ್ಯೆಗಳು ಉದ್ಭವಿಸುತ್ತಲೇ ಇರುವುದರಿಂದ ಪರಿಹಾರದ ಹೊಸ ಹೊಸ ಮಾರ್ಗಗಳು ತೆರೆದುಕೊಳ್ಳುತ್ತಲೇ ಇವೆ.

**ಕ್ರಾಫ್ಟ್ ಪಾರ್ಕ್**

ಸ್ಥಳೀಯ ಉದ್ದಿಮೆದಾರರು ಆಳುವ ಸರ್ಕಾರದತ್ತ ನಿರೀಕ್ಷೆಯ ಮುಖಮಾಡಿ ನಿಂತಿದ್ದಾರೆ. ಹಾಗಂತ ಸರ್ಕಾರ ಇಲ್ಲಿನ ಕುಶಲಕರ್ಮಿಗಳ ಸಮಸ್ಯೆಗಳಿಗೆ ಸ್ಪಂದಿಸಿಲ್ಲವೆಂದೇನೂ ಇಲ್ಲ. ಪಾರಂಪರಿಕ ಕಲೆಯ ಉಳಿವಿಗೆ ತನ್ನದೆ ಪ್ರಯತ್ನಗಳನ್ನು ಶುರುಮಾಡಿದೆ. ಈಗಾಗಲೆ ಈ ಸಂಬಂಧ ಚನ್ನಪಟ್ಟಣದಲ್ಲಿ ಕ್ರಾಫ್ಟ್ ಪಾರ್ಕ್ ನಿರ್ಮಾಣಕ್ಕೆ ಮುಂದಾಗಿದೆ. ಸುಮಾರು ಹದಿನಾಲ್ಕು ಎಕರೆಯಲ್ಲಿ ತಲೆಯೆತ್ತಲಿರುವ ಈ ಪಾರ್ಕ್‌ಗಾಗಿಯೇ ಭೂಮಿ ಹೊರತುಪಡಿಸಿ ಈಗಾಗಲೆ 25 ಕೋಟಿ ರೂಪಾಯಿ ವಿನಿಯೋಗಿಸಲಾಗುತ್ತಿದೆ.

ಇನ್ನೊಂದು ವರ್ಷದಲ್ಲಿ ಈ ಕಲಾ ಉದ್ಯಮ ಕ್ಷೇತ್ರ ಪೂರ್ಣಗೊಳ್ಳಲಿದ್ದು, 2000 ಜನರಿಗೆ ಉದ್ಯೋಗ ದೊರೆಯಲಿದೆ. ಹಾಗಾಗಿ ಈ ಉದ್ಯಮದ ಅವಲಂಬಿತರು ನಿರಾಶರಾಗಬೇಕಾದುದಿಲ್ಲ.

**ಉಪಸಂಹಾರ**

ಒಟ್ಟಾರೆ ಸಮಸ್ಯೆಗಳು ಸದಾ ಮನುಷ್ಯನನ್ನು ಗಟ್ಟಿಗೊಳಿಸುತ್ತವೆ. ಅಂತೆಯೇ ಸವಾಲುಗಳಿಗೆ ಅಣಿಗೊಳಿಸುತ್ತವೆ. ಹಾಗಾಗಿ ಚನ್ನಪಟ್ಟಣದ ಕರಕುಶಲ ಉದ್ಯಮ ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ದೊರೆಯುವ ದಿನವೇನೂ ದೂರವಿಲ್ಲ. ಆ ದೆಸೆಯಲ್ಲಿ ಸರ್ಕಾರ, ಸಮಾಜ ಮತ್ತು ಕಲಾಸಮೂಹ ಚಿಂತಿಸಿ ಮುನ್ನಡೆದರೆ ಈ ಉದ್ಯಮ ಪುನಶ್ಚೇತನಗೊಂಡು ನಳನಳಿಸುವುದರಲ್ಲಿ ಯಾವುದೇ ಅನುಮಾನ ಅನವಶ್ಯಕ.

**ಪರಾಮರ್ಶನ ಗ್ರಂಥಗಳು**


- ಅಂಶಿ ಪ್ರಸನ್ನಕುಮಾರ್. (2016). ಮೈಸೂರು ರಾಜರು ಮತ್ತು ದಸರಾ. ಚಿಂತನಾ ಚಿತ್ತಾರ, ಮೈಸೂರು.
- ಚಂದ್ರ ಪೂಜಾರಿ ಎಂ. (2008). ಸಂಶೋಧನ ಜವಾಬ್ದಾರಿ. ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ.
- ಗೋವಿಂದರಾಜು ಟಿ. (2004). ಚಿತ್ತಾರದ ಗೊಂಬೆ ಚಿತ್ರಕಲೆ. ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.
- ಕರೀಗೌಡ ಬೀಚನಹಳ್ಳಿ. (2000). ಕರಕುಶಲ ಕಲೆಗಳು. ವಿಶ್ವಕೋಶ, ಸಂ–2. ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ.
- ಮಂಜುನಾಥ ಎಂ.ಕೆ. (2015). ರಾಮನಗರ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ. ಎಸ್.ಎಲ್.ಎನ್. ಪಬ್ಲಿಕೇಷನ್, ಬೆಂಗಳೂರು.
- ನಂಜುಂಡರಾವ್ ಎಂ.ಎಸ್. (2000). ಕರ್ನಾಟಕ ತೊಗಲು ಗೊಂಬೆ. ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು.
- ಪರಮಶಿವಯ್ಯ ಜಿ. ಶಂ. (1983). ಕರ್ನಾಟಕ ಜಾನಪದ ಸಮೀಕ್ಷೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
- ರಾಜಪ್ಪ ಡಿ. ಸಿ. (1995). ಮೈಸೂರು ರಾಜ್ಯದಲ್ಲಿ ವಾಣಿಜ್ಯ ಮತ್ತು ಕರಕುಶಲ ಕಲೆಗಳು. ಅಕ್ಷರ ಪ್ರಕಾಶನ. ಹೆಗ್ಗೋಡು, ಸಾಗರ.